ಇ) ೧೩,೨೬೩ ಶಿಕ್ಷಕಿಯರ (ಅಂಗನವಾಡಿ ಕಾರ್ಯಕರ್ತೆಯರ) ಹುದ್ದೆ ಮಂಜೂರಾಗಿದ್ದು, ಆದರಲ್ಲಿ ೧೨,೮೩೦ ಕಾರ್ಯಕರ್ತೆಯರನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು, ಉಳಿದ ೭೩೩ ಅಂಗನವಾಡಿ ಕಾರ್ಯಕರ್ತೆಯರನ್ನು ಶೀಘ್ರವಾಗಿ ಭರ್ತಿ ಮಾಡಲಾಗುವುದು.

ಈ) ಎಸ್.ಎಸ್.ಎಲ್.ಸಿ. ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಉಳ್ಳವರನ್ನು ಭಾರತ ಸರ್ಕಾರದ ಮಾರ್ಗದರ್ಶನದ ಮೇರೆಗೆ ಆಯ್ಕೆ ಮಾಡಲಾಗುವುದು.

ಉ) ಅಂಗನವಾಡಿ ಕೇಂದ್ರಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಪತಿಯಿಂದ ಕಟ್ಟಿಸುವ ಕಟ್ಟಡಗಳಾದ ಪಂಚಾಯಿತಿ ಕಟ್ಟಡಗಳಲ್ಲಿ, ಶಾಲಾಕಟ್ಟಡಗಳಲ್ಲಿ, ಸಮುದಾಯ ಕೇಂದ್ರಗಳಲ್ಲಿ ಹಾಗೂ ಖಾಸಗಿ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ ರಾಷ್ಟ್ರೀಯ ಗ್ರಾಮೀಣ ಯೋಜನೆ ಅನ್ವಯ ೭೩೮ ಅಂಗನವಾಡಿ ಕಟ್ಟಡಗಳನ್ನು ಇದುವರೆವಿಗೆ ಕಟ್ಟಲಾಗಿದೆ.

ಗಡಿ ಪ್ರದೇಶಗಳ ಅಭಿವೃದ್ಧಿ ಬಗ್ಗೆ ನೇಮಿಸಿರುವ ಜಂಟಿ ಸಮಿತಿ ವರದಿ.

೧೫೩೩. ಶ್ರೀ ಆರ್. ಎಸ್. ಮೂನೇನಕೊಪ್ಪ (ಬೆಳಗಾಂ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಡಿ ಪ್ರದೇಶಗಳಿಗೆ ಭೇಟಿ ನೀಡಿ ಆ ಪ್ರದೇಶಗಳ ಅಭಿವೃದ್ಧಿಯನ್ನು ಅಭ್ಯಸಿಸಲು ಮತ್ತು ಸೂಕ್ತ ಶಿಫಾರಸ್ಸು ಮಾಡಲು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯೊಂದನ್ನು ನೇಮಿಸಲಾಗಿತ್ತೇ ?

ಆ) ಹಾಗಾದರೆ ಜಂಟಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ ? ಮತ್ತು ವರದಿಯನ್ನು ಸಲ್ಲಿಸಿದ ದಿನಾಂಕ ?

ಇ) ಸರ್ಕಾರವು ಸಮಿತಿಯ ವರದಿಯನ್ನು ಸದನದ ಮುಂದೆ ಮಂಡಿಸುವುದೆ,

ಈ) ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಶೈಕ್ಷಣಿಕ ಮತ್ತು ಭಾಷಾ ವಿಷಯಗಳ ಬಗ್ಗೆ ಉಭಯ ರಾಜ್ಯಗಳ ಸಮಿತಿಗಳು ತಯಾರಿಸಿದ ವರದಿಗಳನ್ನು ದಿನಾಂಕ ೯-೧೦-೧೯೮೫ರಂದು ವಿನಿಮಯ ಮಾಡಿ ಕೊಳ್ಳಲಾಗಿದೆ.

ಇ) ಉಭಯ ಸರ್ಕಾರದ ಸಮಿತಿಗಳು ಸಲ್ಲಿಸಿರುವ ವರದಿ ಆಯಾ ಸರ್ಕಾರಗಳಿಗೆ ನೀಡಿರುವ ಅಧಿಕೃತ ಸಲಹೆಯಂತಿವೆ. ತತ್ಪರಿಣಾಮವಾಗಿ ಅವುಗಳನ್ನು ಸದನದ ಮುಂದೆ ಮಂಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಕ್ರಮವನ್ನು ಆರಂಭಿಸಿದೆ.

ಮನವಿಗಳನ್ನು ಒಪ್ಪಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಕೆಳಕಂಡ ಮನವಿಗಳನ್ನು ಒಪ್ಪಿಸುತ್ತಿದ್ದೇನೆ.—

(ಅ) ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಮಂಡೇಕೋಲು ಗ್ರಾಮದ ಮಂಡೇಕೋಲು-ಬೈತ್ತಡ್ಕ ಲೋಕೋಪಯೋಗಿ ರಸ್ತೆಗೆ ಅಡ್ಡಾರು ಎಂಬಲ್ಲಿ ಪಯಸ್ವಿನಿ ನದಿಗೆ ಸೇತುವೆ ನಿರ್ಮಾಣ.

(ಆ) ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಮಂಡೇಕೋಲು ಗ್ರಾಮದ ಬಿಡ್ಡಿಂಚಾಲು ಎಂಬಲ್ಲಿ ಸೇತುವೆ ನಿರ್ಮಾಣ.

(ಇ) ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಉಬರಡ್ಕ ಮಿತ್ತೂರು ರಸ್ತೆಗೆ ಡಾಂಬರೀಕರಣ.

(ಈ) ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಸುಳ್ಯದಲ್ಲಿ ವಿದ್ಯುತ್ ಇಲಾಖೆಯ ಉಪ ವಿಭಾಗ ಕಛೇರಿ ತೆರೆಯುವುದು.

ಅಧ್ಯಕ್ಷರು.—ಮನವಿಗಳನ್ನು ಪುಂಡಿಸಲಾಯಿತು. ಮನವಿಗಳನ್ನು ಅರ್ಜಿಗಳ ಸಮಿತಿಗೆ ಒಪ್ಪಿಸಲಾಗಿದೆ. ಮನವಿಗಳನ್ನು ಒಪ್ಪಿಸಬೇಕಾಗಿದ್ದ ಮತ್ತೊಬ್ಬರು ಸದಸ್ಯರು ಶ್ರೀ ಜಿ. ಎಸ್. ಆಚಾರ್ ಅವರು ಗೈರುಹಾಜರಿದ್ದಾರೆ. ಇನ್ನುಮುಂದೆ ಗಮನ ಸೆಳೆಯುವ ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು

(i) ವಿಷಯ.—ಬಳ್ಳಾರಿ ಜಿಲ್ಲೆಯಲ್ಲಿ ತೀವ್ರ ಬರಗಾಲಕ್ಕೆ ಸಿಲುಕಿ ಗಂಭೀರ ಪರಿಸ್ಥಿತಿ ಉಂಟಾಗಿರುವ ಬಗ್ಗೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯು ತೀವ್ರ ಬರಗಾಲಕ್ಕೆ ಸಿಲುಕಿ ಗಂಭೀರ ಪರಿಸ್ಥಿತಿ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಪ್ರಸ್ತುತ ವರ್ಷದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿನ ಎಲ್ಲ ೮ ತಾಲ್ಲೂಕಿನಲ್ಲಿ ಹರಡಿರುವ ೯೦೭ ಹಳ್ಳಿಗಳಲ್ಲಿ ಬರಗಾಲ ಪರಿಸ್ಥಿತಿಯು ಉದ್ಭವಿಸಿದೆ ಎಂದು ರಾಜ್ಯ ಸರ್ಕಾರವು ಗುರುತಿಸಿದೆ. ಈ ಹಳ್ಳಿಗಳಲ್ಲಿನ ೭.೦೪ ಲಕ್ಷ ಜನಸಂಖ್ಯೆ ಮತ್ತು ೪.೦೫ ಲಕ್ಷದಷ್ಟು ಜನಸಂಖ್ಯೆಯ ಜಾನುವಾರು ಅಭಾವ ಪರಿಸ್ಥಿತಿಗೆ ಈಡಾಗಿವೆಯೆಂದು ಗುರುತಿಸಲಾಗಿದೆ. ಈ ಬರಗಾಲ ಪರಿಸ್ಥಿತಿಗೆ ಈಡಾದ ಸಣ್ಣ ಮತ್ತು ಅತಿ ಸಣ್ಣ ರೈತರ ಕುಟುಂಬಗಳ ಸಂಖ್ಯೆ ೫೮,೫೦೮ ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ೧,೫೩,೮೭೨ ಆಗಿವೆ.

ಬರಗಾಲ ಪರಿಸ್ಥಿತಿಗೆ ಈಡಾದ ಜನ ಮತ್ತು ಜಾನುವಾರುಗಳಿಗೆ ಪರಿಹಾರ ಒದಗಿಸಿಕೊಡುವ ದಿಸೆಯಲ್ಲಿ ಬಳ್ಳಾರಿಯೂ ಒಳಗೊಂಡಂತೆ, ರಾಜ್ಯದ ಎಲ್ಲ ಅಭಾವ ಪೀಡಿತ ಜಿಲ್ಲೆಗಳಲ್ಲಿ ಹಲವಾರು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕೇಂದ್ರ ಸರ್ಕಾರವು ಬರಪರಿಹಾರಕ್ಕಾಗಿ ನಿಗಧಿಪಡಿಸಿದ ಕೇಂದ್ರ ಧನ ಸಹಾಯವಾದ ೫೩.೩೧ ಕೋಟಿ ರೂಪಾಯಿಗಳಿಗೆ ವಿರುದ್ಧವಾಗಿ, ರಾಜ್ಯ ಸರ್ಕಾರವು, ಈಗಾಗಲೇ ಒಟ್ಟು ೮೦.೩೪ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಮತ್ತು ೧೯೮೬ರ ಜನವರಿ ತಿಂಗಳ ಕೊನೆಯವರೆಗೆ ೫೬.೯೭ ಕೋಟಿ ರೂಪಾಯಿಗಳ ಖರ್ಚು ಮಾಡಿದ್ದು, ಕೇಂದ್ರದ ಸಹಾಯದ ಮಿತಿಯನ್ನು ಈಗಾಗಲೇ ಮೀರಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪರಿಹಾರ ಕಾರ್ಯಕ್ರಮಗಳಡಿಯಲ್ಲಿ ಒಟ್ಟು ೩೭೭.೨೩ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ೧೯೮೬ರ ಜನವರಿ ಕೊನೆಯವರೆಗೆ ಒಟ್ಟು ೩೦೫.೭೬ ಲಕ್ಷ ರೂಪಾಯಿಗಳು ಖರ್ಚು ಮಾಡಲಾಗಿದೆ.

ಅಭಾವ ಪೀಡಿತ ಪ್ರದೇಶಗಳಲ್ಲಿನ ಜನತೆಗೆ ಉದ್ಯೋಗ ಒದಗಿಸುವ ಸಲುವಾಗಿ ಪರಿಹಾರ ಕಾಮಗಾರಿಗಳನ್ನು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಬರಗಾಲ ಶೀರ್ಷಿಗಯಡಿಯಲ್ಲಿ ಮತ್ತು ಇತರೇ ಯೋಜನಾ ಕಾರ್ಯಕ್ರಮಗಳಾದ ಎನ್.ಆರ್.ಇ.ಪಿ; ಆರ್.ಎಲ್.ಈ.ಜಿ.ಪಿ. ಮತ್ತಿನ್ನಿತರೇ ಯೋಜನಾ ಕಾರ್ಯಕ್ರಮಗಳಾದ ಸಣ್ಣ ನೀರಾವರಿ, ಭೂಸಾರ ಸಂರಕ್ಷಣೆ, ಮತ್ತಿನ್ನಿತರೇ ಕಾರ್ಯಕ್ರಮಗಳಡಿಯಲ್ಲಿ ತೆಗೆದುಕೊಳ್ಳಲಾಯಿತು. ಮತ್ತು ಈ ಎಲ್ಲ ಕಾರ್ಯಕ್ರಮಗಳಡಿಯಲ್ಲಿ ಬಳ್ಳಾರಿ ಜಿಲ್ಲೆಗೆ ಒಟ್ಟು ೮೦೧.೫೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ೧೯೮೬ರ ಫೆಬ್ರುವರಿ ಕೊನೆಯವರೆಗೆ ಒಟ್ಟು ೭೪೪.೩೫ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಲಾಗಿದೆ. ಒಟ್ಟು ೪೫ ೫೨ ಲಕ್ಷ ಮಾನವ ದಿನಗಳ ಉದ್ಯೋಗವನ್ನು ಸೃಜಿಸಲಾಗಿದೆ. ಹಲವಾರು ಯೋಜನೆಗಳ ಕೆಳಗೆ ಸಾಧಿಸಲಾದ ಪ್ರಗತಿಯು ಈ ಕೆಳಕಂಡಂತೆ ಇದೆ.